small Scale Industries' revival in Karnataka for which the Chairman will be the Minister himself, There will be representatives of KASSIA, and other organisations. ಕಾಸಿಯಾ, ಛೇಂಬರ್ ಆಫ್ ಕಾಮರ್ಸ್, ಜಿಎಂಸಿಐ ಇದರ ಎಲ್ಲಾ ರೆಪ್ರೆಸೆಂಟೆಟೀವ್ಸ್ ಇದರಲ್ಲಿರುತ್ತಾರೆ. ಇದಕ್ಕೆ ನಾವು ಎಕ್ಸ್‌ಪರ್ಟ್ಸ್ ಹಾಕುತ್ತಿದ್ದೇವೆ. ಎಕ್ಸ್‌ಪರ್ಟ್ ಕಮಿಟಿ ಏಕೆ ನಾನು ಮಾಡುತ್ತಿದ್ದೇವೆಂದರೆ, ತಾವು ಹೇಳಿದ ಹಾಗೆ. ಟ್ಯಾಕ್ಸ್ ಎಗ್ಜೆಂಪ್‌ಷನ್ ಕೊಡುವುದು. ಎಲ್ಲಿ ರಿವೈವ್ ಮಾಡಲಿಕ್ಕೆ ನಾವು ಮೆಷಿನರಿ ಮಾಡರ್ನೈಜ್ ಮಾಡಬೇಕಾಗಿದೆ, ಎಲ್ಲಿ ಅಪ್‌ಗ್ರೇಡ್ ಮಾಡಬೇಕಾಗಿದೆ, ಹ್ಯೂಮನ್ ರಿಸೋರ್ಸ್ ಸ್ಕಿಲ್ ಅನ್ನು ಎಲ್ಲಿ ಅಪ್‌ಗ್ರೇಡ್ ಮಾಡಬೇಕಾಗಿದೆ. ಯಾವ ರೀತಿಯಾಗಿ ಮಾರ್ಕೆಟಿಂಗ್ ಮಾಡಬೇಕಾಗಿದೆ ಎಂಬ ಬಗ್ಗೆ ಕಮಿಟಿ ಮಾಡುತ್ತಿದ್ದೇವೆ. ಮಾನ್ಯ ಪ್ರಹ್ಲಾದ್ ಜೋಷಿಯವರು, ಗೌರವಾನ್ವಿತ ಲೋಕಸಭಾ ಸದಸ್ಯರು ಬಹಳ ಪ್ರಮುಖವಾದ ಅಂಶವನ್ನು ನಮ್ಮ ಉಪ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದರು. ಬ್ರಾಂಡೆಡ್ ಮತ್ತು ಅನ್-ಬ್ರಾಂಡೆಡ್ ಪೂರಕಗಳ ವಿಚಾರದಲ್ಲಿ, ಪೂರಕಗಳ ಲಕ್ಷಾಂತರ ಕೋಟ್ಯಾಂತರ ವ್ಯವಹಾರದ್ದಾಗಿದೆ. ಅದು ತಮಿಳುನಾಡಿಗೆ ಹೋಗುತ್ತಿತ್ತು. ನಮ್ಮ ರಾಜ್ಯದಲ್ಲಿ ಆಗುತ್ತಿರಲಿಲ್ಲ. ಆದುದರಿಂದ, ಉಪ ಮುಖ್ಯಮಂತ್ರಿಗಳು ಆ ಟ್ಯಾಕ್ಸ್ ಅನ್ನು ಕಡಿಮೆ ಮಾಡಿದ್ದರಿಂದ, ನಾ ಇನ್ ಪಾರ್ ವಿಥ್ ತಮಿಳುನಾಡು ಆಯಿತು. ನಮ್ಮಲ್ಲೂ ಸಹ ಸಾಕಷ್ಟು ಖರ್ಚಾಗುವ ಅವಕಾಶವಿದೆ. It is also one of the tiny industries we have. Like that I am doing my best with the assistance of the hon'ble Deputy Chief minister to give such incentives. we will definitely have an open on this issue

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸಿಂಧ್ಯರವರು ಸಕ್ಕರೆ ಕಾರ್ಖಾನೆ ಬಗ್ಗೆ ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದರ ಬಗ್ಗೆ ನಂತರ ಬರುತ್ತೇನೆ. ಸಕ್ಕರೆ ಬಗ್ಗೆ ಪ್ರಶ್ನೆ ಇದೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯನ್ನು ಮೆಗಾ ಸಿಟಿಯೋಜನೆಯಲ್ಲಿ ಸೇರ್ಪಡಿಸುವ ಬಗ್ಗೆ

48(367) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್(ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಮೆಗಾಸಿಟಿ ಯೋಜನೆಯು ಯಾವ ಯಾವ ನಗರಗಳಲ್ಲಿ ಅಸ್ತಿತ್ವದಲ್ಲಿದೆ;

ಆ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಮೆಗಾಸಿಟಿ ಯೋಜನೆಯಡಿಯಲ್ಲಿದೆಯೇ;

ಇ) ಇದ್ದಲ್ಲಿ, ಸದರಿ ಯೋಜನೆಯಿಂದ ಸಿಗುವ ಸೌಲಭ್ಯಗಳಾವುವು ;

ಈ) ಮೆಗಾಸಿಟಿ ಯೋಜನೆಯಲ್ಲಿ ಸೇರ್ಪಡಿಸುವ ನಗರಗಳಿಗೆ ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತದೆ ; (ವಿವರ ನೀಡುವುದು) ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು) :

ಅ) ಮೆಗಾಸಿಟಿ ಯೋಜನೆಯು ರಾಜ್ಯದಲ್ಲಿ ಬೆಂಗಳೂರು ನಗರದಲ್ಲಿ ಮಾತ್ರ ಅಸ್ತಿತ್ವದಲ್ಲಿದೆ.

ಆ) ಇಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಮೆಗಾಸಿಟಿ ಯೋಜನೆಯಡಿ ಭಾರತ ಸರ್ಕಾರವು ಫೆಬ್ರವರಿ 1995ರಲ್ಲಿ ನಿಗದಿಪಡಿಸಿದ ಈ ಕೆಳಕಂಡ ಮಾನದಂಡದ ಆಧಾರದ ಮೇಲೆ ನಗರಗಳನ್ನು ಆಯ್ಕೆ ಮಾಡಿದೆ.

1. ಜನಸಂಖ್ಯೆ ಆಧಾರದ ಮೇಲೆ ವರ್ಗೀಕರಿಸಿದ ಮೆಗಾ/ಮೆಟ್ರೋ ನಗರಗಳು.

2. ನಗರ ಬೆಳವಣಿಗೆಯ ಪ್ರಮಾಣ.

3. ರಾಷ್ಟ್ರೀಯ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಈ ನಗರಗಳ ಕೊಡುಗೆ.

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ : ಸಚಿವರು ಉತ್ತರ ನೀಡಿದ್ದಾರೆ. ಆದರೆ, ಇಡೀ ಕರ್ನಾಟಕದಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ 2ನೇ ಸ್ಥಾನದಲ್ಲಿದೆ. ಈ ನಗರ ಮೆಗಾಸಿಟಿ ಯೋಜನೆಯಲ್ಲಿ ಬರುವುದಿಲ್ಲವೆಂದರೆ, ಬೇರೆ ರಾಜ್ಯದೊಳಗೆ ಬಹಳಷ್ಟು ಸಿಟಿಗಳನ್ನು ಮೆಗಾಸಿಟಿ ಯೋಜನೆಯಲ್ಲಿ ತೆಗೆದುಕೊಂಡು, ಅಭಿವೃದ್ಧಿಗೆ ಕಾರಣವಾಗಿದೆ. ಆದುದರಿಂದ, ಈ ಯೋಜನೆಯಡಿಯಲ್ಲಿ ತಾವು ತೆಗೆದುಕೊಳ್ಳಬೇಕಾದರೆ ಜನಸಂಖ್ಯೆಯಾಗಲಿ ಅಥವಾ ಬೇರೆ ಬೇರೆ ಯಾವ್ಯಾವ ಕಂಡೀಸನ್‌ಗಳಿವೆ. ಈ ಕಂಡೀಷನ್‌ಗಳನ್ನು ಅಳವಡಿಸಲು ಸರ್ಕಾರವೇನು ಪ್ರಯತ್ನ ಮಾಡಿದೆ ಎಂದು ನಾನು ತಮ್ಮ ಮೂಲಕ ಸಚಿವರಿಗೆ ಕೇಳಬಯಸುತ್ತೇನೆ.

ಶ್ರೀ ಎಸ್.ಆರ್. ಮೋರೆ : ಇದನ್ನು ಕೇಂದ್ರಸರ್ಕಾರದವರು ಮಾಡುತ್ತಾರೆ. ಅಂದರೆ, ಮೆಗಾಸಿಟಿ ಆಗಬೇಕಾದರೆ ಕನಿಷ್ಠ 10 ಲಕ್ಷ ಜನಸಂಖ್ಯೆ ಇರಬೇಕು. ಆದಾದಮೇಲೆ, ಅಲ್ಲಿ ಆರ್ಥಿಕವಾಗಿ ರಾಷ್ಟ್ರಕ್ಕೆ ಎಷ್ಟು ಕೊಡುಗೆಯಾಗಿದೆ ಇದರ ಮೇಲೆ ಮೆಗಾಸಿಟಿ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಕೇವಲ ಬೆಂಗಳೂರನ್ನು ಮಾತ್ರ ಇವತ್ತು ಮೆಗಾಸಿಟಿ ಎಂದು ಗುರುತಿಸಲಾಗಿದೆ. ನಮ್ಮ ರಾಷ್ಟ್ರದಲ್ಲಿ 4 ಮೆಗಾಸಿಟಿ ಇವೆ. ಆದರೆ, 1995ರಲ್ಲಿ ಮಾನದಂಡವನ್ನು ಬದಲಾಯಿಸಿ, ಹೈದರಾಬಾದ್ ಮತ್ತು ಬೆಂಗಳೂರನ್ನು ಮಾತ್ರ ಸೇರಿಸಿದ್ದಾರೆ. ಆದರೆ, ನಾವು ಹುಬ್ಬಳ್ಳಿ–ಧಾರವಾಡವನ್ನು ಅಲಕ್ಷ್ಯ ಮಾಡಿಲ್ಲ. ಈಗಾಗಲೇ ಎಡಿಬಿ ಪ್ರಾಜೆಕ್ಟ್‌ನಲ್ಲಿ ಹುಬ್ಬಳ್ಳಿ–ಧಾರವಾಡ ನಾರ್ತ್ ಕರ್ನಾಟಕ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ನಲ್ಲಿ ಹಾಕಿದ್ದೇವೆ. ಅದಕ್ಕೆ ಸುಮಾರು 286 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಅನ್ನು ನಾವು ತಯಾರಿಸಿದ್ದೇವೆ.

ರಾಜ್ಯದಲ್ಲಿ ಸ್ಥಗಿತಗೊಂಡಿರುವ ಸಕ್ಕರೆ ಕಾರ್ಖಾನೆಗಳು

49(382) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಸಕ್ಕರೆ ನಿರ್ದೇಶನಾಲಯದ ಮತ್ತು ಸಹಕಾರ ಇಲಾಖೆಯಿಂದ ನೊಂದಾಯಿತ ಕಾರ್ಖಾನೆಗಳವಾರು ಸಂಪೂರ್ಣ ವಿವರ ನೀಡುವುದು) ;

ಆ) ಈ ಪೈಕಿ ಸರ್ಕಾರಿ ಮತ್ತು ಖಾಸಗೀ ಕಾರ್ಖಾನೆಗಳೆಷ್ಟು ? ಅವು ಯಾವುವು ;

ಇ) ಇವುಗಳಲ್ಲಿ ಹಾಲಿ ಅಸ್ಥಿತ್ವದಲ್ಲಿರುವುದೆಷ್ಟು ? ಹಾಗೂ ಸ್ಥಗಿತಗೊಂಡಿರುವವೆಷ್ಟು ;

ಈ) ಸದರಿ ಕಾರ್ಖಾನೆಗಳು ಸ್ಥಗಿತಗೊಳ್ಳಲು ಕಾರಣಗಳೇನು ;

ಉ) ಸ್ಥಗಿತಗೊಂಡ ಕಾರ್ಖಾನೆಗಳ ಕಾರ್ಮಿಕರ ಸಮಸ್ಯೆ ಬಗೆಹರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ;

ಊ) ಇಂತಹವುಗಳ ಪುನಃಶ್ಚೇತನಕ್ಕೆ ಸರ್ಕಾರ ಮುಂದಾಗುವದೇ ಹಾಗೂ ಹಿರಿಯೂರಿನ ವಾಣಿವಿಲಾಸ ಸಹಕಾರ ಸಕ್ಕರೆ ಕಾರ್ಖಾನೆ ಸಮಸ್ಯೆಗೆ ಪರಿಹಾರ ಒದಗಿಸುವಲ್ಲಿ ಸರ್ಕಾರದ ನಿಲುವೇನು?